ಓಂ ಶಾಂತಿ, ಬಾಪ್ ದಾದಾ ಅವ್ಯಕ್ತ ಮುರಳಿ 24-01-1970.

***ಬ್ರಾಹ್ಮಣರ ಮುಖ್ಯ ವ್ಯಾಪಾರ - ಸಮರ್ಪಣೆ ಮಾಡುವುದು ಮತ್ತು ಮಾಡಿಸುವುದು***

(ब्राहमणों का मुख्य धंधा – समर्पण करना और कराना)

ತಮ್ಮ ಜೀವನದ ದೋಣಿಯನ್ನು ಯಾರಿಗೆ ಸಮರ್ಪಣೆ ಮಾಡಿದ್ದೀರಿ? (ಶಿವತಂದೆಗೆ). ಶ್ರೀಮತದಂತೆ ಪೂರ್ಣ ರೀತಿ ನಡೆಯುತ್ತೀದ್ದೀರಾ? **ಶ್ರೀಮತದಂತೆ ನಡೆಯುವುದು ಎಂದರೆ ಪ್ರತಿಯೊಂದು ಕರ್ಮದಲ್ಲಿ ಅಲೌಕಿಕತೆಯನ್ನು ತರುವುದು ,** ಶಿವತಂದೆಯ ಆಸ್ತಿಯ ಪೂರ್ಣ ಅಧಿಕಾರಿ ಎಂದು ತಮ್ಮನ್ನು ತಿಳಿಯುತ್ತೀರಾ? ಯಾರು ಆಸ್ತಿಗೆ ಅಧಿಕಾರಿಯಾಗುತ್ತಾರೋ ಅವರಿಗೆ ಎಲ್ಲದರ ಮೇಲೂ ಅಧಿಕಾರ ಇರುತ್ತದೆ. ಅವರು ಯಾವುದೇ ಮಾತಿಗೆ ಅಧೀನರಾಗಿರುವುದಿಲ್ಲ. ದೇಹ, ದೇಹ ಸಂಬಂಧಿಗಳ ಅಥವಾ ದೇಹದ ಯಾವುದೇ ವಸ್ತುಗಳ ಅಧೀನರಾಗಿದ್ದರೆ ಅಂತಹವರು ಅಧಿಕಾರಿಗಳಾಗುವುದಿಲ್ಲ. ಅಧಿಕಾರಿಗಳು ಅಧೀನರಾಗಿರುವುದಿಲ್ಲ. ಸದಾ ತಮ್ಮನ್ನು ಅಧಿಕಾರಿ ಎಂದು ತಿಳಿಯುವುದರಿಂದ ಯಾವುದೇ ಪ್ರಕಾರದ ಮಾಯೆಯ ರೂಪದ ಅಧೀನತೆಯಿಂದ ಬಚಾವ್ ಆಗುವಿರಿ, ಅಲೌಕಿಕ ಕರ್ಮ ಎಷ್ಟು ಮಾಡಿದಿರಿ ಮತ್ತು ಲೌಕಿಕ ಕರ್ಮ ಎಷ್ಟು ಮಾಡಿದಿರಿ ಎಂದು ಸದಾ ಪರಿಶೀಲನೆ ಮಾಡಿಕೊಳ್ಳಿರಿ. ಅಲೌಕಿಕ ಕರ್ಮವು ಬೇರೆಯವರಿಗೆ ಅಲೌಕಿಕರಾಗಲು ಪ್ರೇರಣೆ ಕೊಡುವುದು. ಎಲ್ಲರೂ ಈ ಗುರಿಯನ್ನು ಇಟ್ಟುಕೊಂಡಿದ್ದಾರೆ - ನಾವು ಉನ್ನತೋನ್ನತ ತಂದೆಯ ಮಕ್ಕಳು ಉನ್ನತೋನ್ನತ ರಾಜ್ಯವನ್ನು ಪಡೆಯುತ್ತೇವೆ ಎಂದು. ಅಥವಾ ಏನು ಸಿಗುತ್ತದೆಯೋ ಅದು ಸರಿ ಎನ್ನುತ್ತೀರಾ? ಅತೀ ಶ್ರೇಷ್ಠ ತಂದೆಯ ಮಕ್ಕಳಾಗಿದ್ದೀರಿ ಎಂದಾಗ ಗುರಿಯೂ ಶ್ರೇಷ್ಠವಾಗಿರಬೇಕು. ಅವಿನಾಶಿ ಆತ್ಮಿಕ ಸ್ಥಿತಿಯಲ್ಲಿದ್ದಾಗಲೇ ಅವಿನಾಶಿ ಸುಖದ ಪ್ರಾಪ್ತಿಯಾಗುವುದು. ಆತ್ಮ ಅವಿನಾಶಿಯಲ್ಲವೇ.

ಮಧುಬನಕ್ಕೆ ಬಂದು ಮಧುಬನದ ವರದಾನವನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಾ? ವರದಾನ ಎಂಬುದು ಪರಿಶ್ರಮವಿಲ್ಲದೆ ಸಹಜವಾಗಿಯೇ ಸಿಗುತ್ತದೆ. ಅವ್ಯಕ್ತ ಸ್ಥಿತಿಯಲ್ಲಿ ಅವ್ಯಕ್ತ ಆನಂದ, ಅವ್ಯಕ್ತ ಸ್ನೇಹ ಅವ್ಯಕ್ತ ಶಕ್ತಿ ಸಹಜವಾಗಿಯೇ ಪ್ರಾಪ್ತಿಯಾಗುತ್ತದೆ. ಇಂತಹ ವರದಾನ ಸದಾ ಖಾಯಂ ಆಗಿರಬೇಕೆಂದು ಪ್ರಯತ್ನ ಮಾಡಲಾಗುತ್ತದೆ. ಸದಾ ವರದಾತನ ನೆನಪಿನಲ್ಲಿರುವುದರಿಂದ ಈ ವರದಾನ ಅವಿನಾಶಿಯಾಗಿರುತ್ತದೆ. ಒಂದು ವೇಳೆ ವರದಾತನನ್ನು ಮರೆತರೆ ವರದಾನವೂ ನಾಶವಾಗುತ್ತದೆ. ಆದ್ದರಿಂದ ವರದಾತನನ್ನು ಎಂದಿಗೂ ಬೇರೆ ಮಾಡಬೇಡಿರಿ. ವರದಾತನ ಜೊತೆಯಿದ್ದಾಗ ವರದಾನವೂ ಜೊತೆ ಇಡೀ ಸೃಷ್ಟಿಯಲ್ಲಿ ಎಲ್ಲಕ್ಕಿಂತ ಪ್ರಿಯ ಶಿವತಂದೆಯಾದಾಗ ಅವರ ನೆನಪೂ ಕೂಡ ತಾನಾಗಿಯೇ ಇರಬೇಕು. ಪ್ರಿಯರಲ್ಲಿ ಪ್ರಿಯ ಒಬ್ಬರೇ ಆದಾಗ ಅವರ ನೆನಪು ಹೇಗೆ ಮರೆಯುತ್ತದೆ? ಅವಶ್ಯವಾಗಿ ಮತ್ತೇನಾದರೂ ನೆನಪಿಗೆ ಬರುತ್ತಿರಬಹುದು, ಯಾವುದೇ ಮಾತು ಕಾರಣವಿಲ್ಲದೇ ಇರುವುದಿಲ್ಲ. ವಿಸ್ಮೃತಿಗೂ ಕಾರಣವಿದೆ. ವಿಸ್ಮೃತಿಯ ಕಾರಣದಿಂದ ಪ್ರಿಯವಾಗಿ ಇರುವ ವಸ್ತು ದೂರವಾಗಿಬಿಡುತ್ತದೆ. ವಿಸ್ಮೃತಿಗೆ ಕಾರಣ - ತಮ್ಮ ಬಲಹೀನತೆ, ಶ್ರೀಮತದಂತೆ ಪೂರ್ಣ ರೀತಿಯಿಂದ ನಡೆಯದಿದ್ದಾಗ ಬಲಹೀನತೆ ಬರುತ್ತದೆ ಮತ್ತು ಬಲಹೀನತೆಯ ಕಾರಣ ವಿಸ್ಮೃತಿಯಾಗುತ್ತದೆ. ವಿಸ್ಮೃತಿಯಲ್ಲಿ ಪ್ರಿಯ ವಸ್ತು ಮರೆಯುತ್ತದೆ. ಆದ್ದರಿಂದ ಸದಾ ಕರ್ಮ ಮಾಡುವ ಮೊದಲೇ ಶ್ರೀಮತದ ಸ್ಮೃತಿಯನ್ನಿಟ್ಟು ನಂತರ ಪ್ರತಿಯೊಂದು ಕರ್ಮವನ್ನು ಮಾಡಿ, ಆಗ ಆ ಕರ್ಮ ಶ್ರೇಷ್ಠವಾಗುವುದು. ಶ್ರೇಷ್ಠ ಕರ್ಮದಿಂದ ಶ್ರೇಷ್ಠ ಜೀವನ ಸ್ವತಃ ತಯಾರಾಗುವುದು, ಆದ್ದರಿಂದ ಪ್ರತಿಯೊಂದು ಕಾರ್ಯದಲ್ಲಿ ಮೊದಲು ತಮ್ಮ ಪರಿಶೀಲನೆ ಮಾಡಿಕೊಳ್ಳಬೇಕು. ಕರ್ಮ ಮಾಡಿದ ನಂತರ ಪರಿಶೀಲನೆ ಮಾಡುವುದರಿಂದ ಮಾಡಿದ ಉಲ್ಟಾ ಕರ್ಮ ವಿಕರ್ಮವಾಗುತ್ತದೆ. ಆದ್ದರಿಂದ ಮೊದಲು ಪರಿಶೀಲನೆ ಮಾಡಿ ನಂತರ ಕರ್ಮ ಮಾಡಿ.

ಈಶ್ವರೀಯ ಶಿಕ್ಷಣವನ್ನು ಬಹಳ ಸಹಜ ಮತ್ತು ಸರಳ ರೀತಿಯಲ್ಲಿ ಯಾರಿಗಾದರೂ ಕೊಡುವ ವಿಧಿ ಗೊತ್ತಿದೆಯೇ? ಒಂದು ಕ್ಷಣದಲ್ಲಿ ಯಾರಿಗಾದರೂ ತಂದೆಯ ಪರಿಚಯ ಕೊಡಬಲ್ಲಿರಾ? ಎಷ್ಟು ಬೇರೆಯವರಿಗೆ ಪರಿಚಯ ಕೊಡುವಿರೋ ಅಷ್ಟೇ ತಮ್ಮ ಭವಿಷ್ಯ ಪ್ರಾಲಬ್ಧ ಮಾಡಿಕೊಳ್ಳುವಿರಿ, ಇಲ್ಲಿ ಕೊಡುವುದು ಮತ್ತು ಅಲ್ಲಿ ತೆಗೆದುಕೊಳ್ಳುವುದು. ಎಷ್ಟು ಕೊಡುವಿರೋ ಅಷ್ಟು ತೆಗೆದುಕೊಳ್ಳುವೆವು ಎಂದು ತಿಳಿಯಿರಿ, ಈ ಜ್ಞಾನದ ಪ್ರತ್ಯಕ್ಷ ಫಲ ನಿಮ್ಮ ಭವಿಷ್ಯದ ಪ್ರಾಲಬ್ಧದ ಪ್ರಾಪ್ತಿಯ ಅನುಭವ ಮಾಡಿಸುವುದು, ವರ್ತಮಾನ ಪ್ರಾಪ್ತಿಯ ಆಧಾರದ ಮೇಲೆ ಭವಿಷ್ಯವನ್ನು ತಿಳಿದುಕೊಳ್ಳಬಹುದು. ವರ್ತಮಾನದ ಅನುಭವ ಭವಿಷ್ಯವನ್ನು ಸ್ಪಷ್ಟ ಮಾಡುತ್ತದೆ. ತಮ್ಮನ್ನು ಯಾವ ರೂಪದಲ್ಲಿ ತಿಳಿದು ನಡೆಯುತ್ತೀರಿ? ನಾನು ಶಕ್ತಿಯಾಗಿದ್ದೇನೆ, ಜಗನ್ಮಾತೆಯಾಗಿದ್ದೇನೆ - ಈ ಭಾವನೆಯಿರುತ್ತದೆಯೇ? ಜಗನ್ಮಾತೆಯ ರೂಪದಲ್ಲಿ ಜಗತ್ತಿನ ಕಲ್ಯಾಣದ ರೂಪವಿರುತ್ತದೆ. ಶಿವಶಕ್ತಿ ರೂಪದಲ್ಲಿ ಯಾವುದೇ ದುರ್ಬಲತೆ(ಬಲಹೀನತೆ) ಇರುವುದಿಲ್ಲ. ನಾನು ಜಗತ್ತಿನ ಮಾತೆಯಾಗಿದ್ದೇನೆ ಮತ್ತು ಶಿವಶಕ್ತಿಯಾಗಿದ್ದೇನೆ ಎಂಬ ಈ ಎರಡೂ ರೂಪದ ಸ್ಥಿತಿಯಲ್ಲಿ ಇದ್ದಾಗ ಮಾಯಾಜೀತ್ ಆಗುವಿರಿ ಮತ್ತು ವಿಶ್ವಕಲ್ಯಾಣದ ಭಾವನೆಯಿಂದ ಅನೇಕ ಆತ್ಮರ ಕಲ್ಯಾಣಕ್ಕೆ ನಿಮಿತ್ತರಾಗುವಿರಿ. ಸಂಬಂಧದಿಂದ ಅಥವಾ ತಮ್ಮ ಶರೀರದಿಂದ ನಷ್ಟೋಮೋಹ ಆಗಿರುವಿರಾ? ನಷ್ಟೋಮೋಹದ ಅಂತಿಮ ಸ್ಥಿತಿ ಯಾವುದು? ಎಷ್ಟು ನಷ್ಟೋಮೋಹ ಆಗುವಿರೋ ಅಷ್ಟು ಸ್ಮೃತಿ ಸ್ವರೂಪ ಆಗುವಿರಿ, ಹಾಗಾದರೆ ಸ್ಮೃತಿಯನ್ನು ಸದಾ ಕಾಯಂ ಇಟ್ಟುಕೊಳ್ಳಲು ಸಾಧನವಾಗಿದೆ ನಷ್ಟೋಮೋಹ ಆಗುವುದು. ನಷ್ಟೋಮೋಹ ಆಗುವುದು ಸಹಜವೋ ಕಠಿಣವೋ? ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡಾಗ ಎಲ್ಲವೂ ಸಹಜವಾಗುವುದು, ಸಮರ್ಪಣೆ ಮಾಡದೇ ತಮ್ಮ ಮೇಲಿಟ್ಟುಕೊಂಡರೆ ಕಷ್ಟವೆನಿಸುತ್ತದೆ. ಸಹಜ ಮಾಡಿಕೊಳ್ಳುವ ಮುಖ್ಯ ಸಾಧನವಾಗಿದೆ – ಸಮರ್ಪಣೆ ಮಾಡುವುದು, ಮಷೀನ್ ಮೂಲಕ ಇಡೀ ಕಾರ್ಖಾನೆ ನಡೆಯುವಂತೆ, ತಂದೆಗೆ ಏನು ಮಾಡಿಸಬೇಕಾಗಿದೆಯೋ ಅದನ್ನು ಮಾಡಿಸಬಲ್ಲಿರಿ. ಮಷೀನಿನ ಕೆಲಸವಾಗಿದೆ ಕಾರ್ಖಾನೆಯನ್ನು ನಡೆಸುವುದು, ಅದೇ ರೀತಿ ನಾವು ನಿಮಿತ್ತರಾಗಿದ್ದೇವೆ. ನಡೆಸುವವನು ಹೇಗೆ ಬೇಕೋ ಹಾಗೆ ನಡೆಸಲಿ, ನಾವು ನಡೆಯಬೇಕು. ಈ ರೀತಿ ತಿಳಿದುಕೊಳ್ಳುವುದರಿಂದ ಕಷ್ಟವೆನಿಸುವುದಿಲ್ಲ. ಸ್ಥಿತಿಯನ್ನು ದಿನದಿಂದ ದಿನಕ್ಕೆ ಪರಿಪಕ್ವವಾಗಿಸಿಕೊಳ್ಳಬೇಕು. ಈ ಮುಖ್ಯ ಮಾತಿನ ಕಡೆಗೆ ಗಮನವಿರಲಿ.**ಎಷ್ಟು ಸ್ವಯಂ ಅನ್ನು ತಂದೆಗೆ ಸಮರ್ಪಣೆ ಮಾಡುವಿರೋ ಅಷ್ಟು ತಂದೆಯೂ ಆ ಮಕ್ಕಳ ಮುಂದೆ ಸಮರ್ಪಣೆಯಾಗುತ್ತಾರೆ**. ಅರ್ಥಾತ್ ತಂದೆಯ ಖಜಾನೆ ಎಷ್ಟಿದೆಯೋ ಅಷ್ಟು ಸ್ವತಃ ಅವರದಾಗಿ ಬಿಡುತ್ತದೆ. ಯಾವ ಗುಣವು ತಮ್ಮದಾಗಿರುತ್ತದೆಯೋ ಅದನ್ನು ದಾನ ಮಾಡುವುದರಲ್ಲಿ ಕಷ್ಟ ಏಕೆ ಆಗುತ್ತದೆ? **ಬ್ರಾಹ್ಮಣರ ವ್ಯಾಪಾರವಾಗಿದೆ ಸಮರ್ಪಣೆ ಮಾಡುವುದು ಮತ್ತು ಮಾಡಿಸುವುದು**. ಬ್ರಾಹ್ಮಣರ ವ್ಯಾಪಾರವನ್ನು ಅವರ ಹೊರತು ಇನ್ನಾರು ತಿಳಿದಿದ್ದಾರೆ? ಹೇಗೆ ತಂದೆ ಸ್ವಲ್ಪಕ್ಕೆ ರಾಜಿಯಾಗುವುದಿಲ್ಲವೋ ಹಾಗೆ ಮಕ್ಕಳೂ ಸ್ವಲ್ಪಕ್ಕೆ ರಾಜಿಯಾಗಬಾರದು.

ನಿಮ್ಮನ್ನು ನೀವು ರಾಜನನ್ನಾಗಿ ಮಾಡಿಕೊಂಡಿರುವಿರಾ? ರಾಜ್ ಕೋಟ್ ನ ಸೇವೆ ಎಷ್ಟು ಫಲೀಬೂತವಾಗಬೇಕು, ಹೆಸರೇ ರಾಜ್ ಕೋಟ್, ಆದ್ದರಿಂದ ಇಲ್ಲಿ ರಾಜ್ಯಪದವಿಯನ್ನು ಹೊಂದುವವರು ಕೂಡ ಬಹಳ ಇರಬೇಕು. ಇಂತಹ ಗುರಿಯನ್ನು ಇಟ್ಟುಕೊಂಡು ಸೇವೆ ಮಾಡುತ್ತಾ ಹೋಗಿ ರಾಜರನ್ನು ತಯಾರು ಮಾಡಬೇಕು ಆದರೆ ಪ್ರಜೆಗಳನ್ನಲ್ಲ, ಪ್ರಜೆಗಳು ಸಮಯಕ್ಕೆ ಸ್ವತಹವಾಗಿ ತಯಾರಾಗುತ್ತಾರೆ. ಯಾರು ಎಷ್ಟು ರಾಜ್ಯ ಪದವಿ ಹೊಂದುವವರನ್ನು ತಯಾರು ಮಾಡುತ್ತಾರೋ ಅವರೇ ಮಹಾರಾಜ ಮಹಾರಾಣಿ ಆಗುತ್ತಾರೆ. ಇಷ್ಟು ಶ್ರೇಷ್ಠ ಅಥವಾ ಉನ್ನತವಾದ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು. ನಿಶ್ಚಯದ ಲಕ್ಷಣ ಏನಾಗಿದೆ? ವಿಜಯ. ಎಷ್ಟು ನಿಶ್ಚಯ ಬುದ್ಧಿಯವರಾಗುವಿರೋ ಅಷ್ಟು ಎಲ್ಲ ವಿಷಯಗಳಲ್ಲಿ ವಿಜಯಿ ಆಗುವಿರಿ. ನಿಶ್ಚಯ ಬುದ್ಧಿಯ ಸೋಲು ಎಂದೂ ಆಗುವುದಿಲ್ಲ. ಸೋಲಾಗುತ್ತಿದೆ ಎಂದರೆ ನಿಶ್ಚಯದ ಕೊರತೆ ಇದೆ ಎಂದು ತಿಳಿಯಬೇಕು. ನಿಶ್ಚಯ ಬುದ್ಧಿ ವಿಜಯಿರತ್ನಗಳಲ್ಲಿ ನಾವು ಒಂದು ರತ್ನವೆಂದು ತಮ್ಮನ್ನು ತಿಳಿಯಬೇಕು. ವಿಘ್ನಗಳು ಬರುವವು, ಸದಾ ಇದು ಪೇಪರ್ ಆಗಿದೆ ಎಂದು ತಿಳಿಯುವುದೇ, ಅವುಗಳನ್ನು ಸಮಾಪ್ತಿ ಮಾಡುವ ಯುಕ್ತಿಯಾಗಿದೆ. ತಮ್ಮ ಸ್ಥಿತಿಯ ಪರೀಕ್ಷೆಯನ್ನು ಈ ಪೇಪರ್ ಮಾಡುತ್ತದೆ. ಯಾವುದೇ ವಿಘ್ನ ಬಂದರೂ ಅವುಗಳನ್ನು ಪೇಪರ್ ಎಂದು ತಿಳಿದು ಪಾಸ್ ಮಾಡಬೇಕು. ವಿಷಯವೆಂದು ತಿಳಿಯಬಾರದು, ಪೇಪರ್

ಎಂದು ತಿಳಿಯಬೇಕು. ಪೇಪರ್ ನಲ್ಲಿಯೂ ಬೇರೆಬೇರೆ ಪ್ರಶ್ನೆಗಳಿರುತ್ತವೆ – ಕೆಲವೊಮ್ಮೆ ಮನಸ್ಸಿನ, ಕೆಲವೊಮ್ಮೆ ಸಂಬಂಧದ, ಕೆಲವೊಮ್ಮೆ ಲೋಕ ಮರ್ಯಾದೆಯ, ಕೆಲವೊಮ್ಮೆ ದೇಶವಾಸಿಗಳ ಪ್ರಶ್ನೆಗಳು ಬರುವವು ಆದರೆ ಭಯಪಡಬೇಕಾಗಿಲ್ಲ. ಆಳಕ್ಕೆ ಹೋಗಬೇಕು. ಯಾರಾದರೂ ಇಚ್ಛೆಯಿಲ್ಲದಿದ್ದರೂ ಆಕರ್ಷಿತರಾಗಿ ಬರುವಂತಹ ವಾತಾವರಣವನ್ನು ತಯಾರು ಮಾಡಬೇಕು. ಯಾರು ಎಷ್ಟು ಅವ್ಯಕ್ತ ವಾಯುಮಂಡಲವನ್ನು ರೂಪಿಸುವುದರಲ್ಲಿ ವ್ಯಸ್ತರಾಗುವರೋ ಅಷ್ಟು ದಾರಿಯಲ್ಲಿ ಹೋಗುವಾಗ ಸುಗಂಧ ಆಕರ್ಷಿಸುವಂತೆ ತಾನಾಗಿಯೇ ಎಲ್ಲವೂ ನಡೆಯುತ್ತದೆ. ಹೇಗೆ ಮಾರ್ಗದಲ್ಲಿ ನಡೆಯುತ್ತಿರುವಾಗ ಸುವಾಸನೆ ಬಂದರೆ ಹೋಗಿ ನೋಡಬೇಕು ಎಂದು ಅನಿಸುತ್ತದೆಯೋ, ಹಾಗೆಯೇ ಈ ಅವ್ಯಕ್ತ ಸುವಾಸನೆಯೂ ಸ್ವಯಂ ಆಕರ್ಷಿಸುತ್ತದೆ. ಇದರಲ್ಲಿ ರಾಜ್ಕೋಟ್ ಅವರು ಮುಂದಿರುತ್ತಾರೆಯೋ ಅಥವಾ ಜಾನ್ ಗಡವರು ಮುಂದಿರುತ್ತಾರೆಯೋ ನೋಡುತ್ತೇನೆ. ರಾಜ್ಯ ಪದವಿಯನ್ನು ಹೊಂದುವವರು ಎಷ್ಟುಜನ, ಎಲ್ಲಿಂದ ಜಾಸ್ತಿ ಬರುವರು ಎಂದು ಸ್ಪರ್ಧೆ ಇದೆ.

ಗುರಿಯನ್ನು ಇಟ್ಟುಕೊಂಡಂತೆ ಅವುಗಳನ್ನು ಪೂರ್ಣ ಮಾಡಲು ಅಂತಹ ಲಕ್ಷಣಗಳನ್ನೂ ತಮ್ಮಲ್ಲಿ ತುಂಬಿಕೊಳ್ಳಬೇಕು. ಕಡಿಮೆ ಪರಿಶ್ರಮದವರು ಎಲ್ಲಿಯವರೆಗೆ ತಲುಪುವರು? ಪ್ರಯತ್ನವೆಂಬ ಶಬ್ದವನ್ನು ಹೇಳುವವರು ಪ್ರಯತ್ನದಲ್ಲಿಯೇ ಇರುತ್ತಾರೆ. ಮಾಡಲೇಬೇಕು ಎಂಬ ಗುರಿಯನ್ನು ಇಟ್ಟುಕೊಳ್ಳಬೇಕು. ಪ್ರಯತ್ನವೆಂಬ ಪದವನ್ನು ಹೇಳುವುದು ದುರ್ಬಲತೆಯಾಗಿದೆ. ದುರ್ಬಲತೆಯನ್ನು ದೂರ ಮಾಡಲು ಪ್ರಯತ್ನವೆಂಬ ಶಬ್ದವನ್ನು ಸಮಾಪ್ತಿ ಮಾಡಬೇಕು. ನಿಶ್ಚಯದಿಂದ ವಿಜಯವಾಗುತ್ತದೆ. ಸಂಶಯ ಬರುವುದರಿಂದ ಶಕ್ತಿ ಕಡಿಮೆಯಾಗುತ್ತದೆ. ನಿಶ್ಚಯ ಬುದ್ಧಿಯವರಾದಾಗ ಎಲ್ಲರ ಸಹಯೋಗ ಸಿಗುವುದು. ಯಾವುದೇ ಕಾರ್ಯ ಮಾಡುವಾಗ ಸದಾ ನನ್ನ ಹೊರತು ಬೇರೆ ಯಾರೂ ಇದನ್ನು ಮಾಡಲಾರರು. ಎಂದು ಯೋಚಿಸಿದಾಗ ಸಫಲತೆ ಸಿಗುವುದು, ಇಂದಿನಿಂದ "ಪ್ರಯತ್ನ" ಎಂಬ ಶಬ್ದವನ್ನು ಸಮಾಪ್ತಿಮಾಡಿ, ನಾನು ಶಿವಶಕ್ತಿಯಾಗಿದ್ದೇನೆ. ಶಿವಶಕ್ತಿ ಎಲ್ಲಾ ಕಾರ್ಯಗಳನ್ನು ಮಾಡಬಲ್ಲಳು, ಶಕ್ತಿಯರ ಸವಾರಿ ಸಿಂಹದ ಮೇಲೆ ತೋರಿಸುತ್ತಾರೆ. ಯಾವುದೇ ಪ್ರಕಾರದಿಂದ ಮಾಯೆ ಸಿಂಹದ ರೂಪದಲ್ಲಿ ಬಂದರೂ ಭಯಪಡಬಾರದು. ಶಿವಶಕ್ತಿ ಎಂದೂ ಸೋಲುವುದಿಲ್ಲ. ಈಗ ಸಮಯವೆಲ್ಲಿದೆ? ಸಮಯಕ್ಕೂ ಮುಂಚೆ ತಮ್ಮನ್ನು ಪರಿವರ್ತಿಸಿ ಕೊಳ್ಳುವುದರಿಂದ ಒಂದಕ್ಕೆ ಲಕ್ಷದಷ್ಟು ಸಿಗುವುದು, ಪರಿವರ್ತನೆ ಆಗಲೇಬೇಕು ಎಂದರೆ ಈ ರೀತಿ ಪರಿವರ್ತನೆಯಾಗಿ, ಹಿಂದಿನ ಕಲ್ಪದಲ್ಲಿಯೂ ಆಸ್ತಿಯನ್ನು ಪಡೆದಿದ್ದೆವು ಎಂಬುದು ನೆನಪಿಗೆ ಬರುತ್ತದೆಯೇ? ತಮ್ಮನ್ನು ಹಳಬರು( ಪುರಾತನ) ಎಂದು ತಿಳಿಯುವುದರಿಂದ ಆ ಕಲ್ಪದ ಹಿಂದಿನ ಸ್ಮೃತಿ ಬರುವುದರಿಂದ ಪುರುಷಾರ್ಥ ಸಹಜವಾಗುತ್ತದೆ. ಏಕೆಂದರೆ ಕಲ್ಪದ ಹಿಂದೆಯೂ ನಾನು ಪಡೆದಿದ್ದೆ ಎಂಬ ನಿಶ್ಚಯವಿರುತ್ತದೆ. ಈಗಲೂ ಪಡೆದೇ ಪಡೆಯುತ್ತೇವೆ. ಕಲ್ಪದ ಹಿಂದಿನ ಸ್ಮೃತಿ, ಶಕ್ತಿಯನ್ನು ಕೊಡುತ್ತದೆ. ತಮ್ಮನ್ನು ಹೊಸಬರು ಎಂದು ತಿಳಿಯುವುದರಿಂದ ಪಡೆಯುವೆವೋ, ಇಲ್ಲವೋ ಎಂದು ದುರ್ಬಲತೆಯ ಸಂಕಲ್ಪಗಳು ಬರುವವು. ಆದರೆ ನಾನಿರುವುದೇ ಕಲ್ಪದ ಹಿಂದಿನವನು ಎಂಬ ಸ್ಮೃತಿಯಿಂದ ಶಕ್ತಿ ಬರುತ್ತದೆ. ಸದಾ ತಮ್ಮನ್ನು ಸಾಹಸಿಯನ್ನಾಗಿ ಮಾಡಿಕೊಳ್ಳಿ. ಸಾಹಸವನ್ನು ಕಳೆದುಕೊಳ್ಳಬಾರದು. ಸಾಹಸದಿಂದ ಸಹಯೋಗ ಸಿಗುತ್ತದೆ. ನಾವು ಸರ್ವಶಕ್ತಿವಂತನ ಮಕ್ಕಳು ಎಂದು ತಂದೆಯನ್ನು ನೆನಪು ಮಾಡುವುದೇ ಸಾಹಸವಾಗಿದೆ. ತಂದೆಯನ್ನು ನೆನಪು ಮಾಡುವುದು ಸಹಜವೋ ಕಷ್ಟವೋ? ಸಹಜ ಮಾಡಿಕೊಂಡರೆ ಸಹಜವಾಗುತ್ತದೆ. ಇದು ನನ್ನ ಕರ್ತವ್ಯವೇ ಆಗಿದೆ. ಏನು ಮಾಡಲಿ ಎಂಬ ಸಂಕಲ್ಪ ಬರುವುದರಿಂದ ಕಷ್ಟವಾಗುತ್ತದೆ. ಇಂತಹ ದುರ್ಬಲ ಸಂಕಲ್ಪಗಳನ್ನು ಎಂದಿಗೂ ತಮ್ಮಲ್ಲಿ ಇಟ್ಟುಕೊಳ್ಳಬೇಡಿ. ಮನಸ್ಸಿನಲ್ಲಿ ದುರ್ಬಲ ಸಂಕಲ್ಪಗಳು ಉತ್ಪನ್ನವಾದರೂ ಅವುಗಳನ್ನು ಅಲ್ಲಿಯೇ ನಾಶಮಾಡಿ ಶಕ್ತಿಶಾಲಿ ಆಗಿರಿ. ಇನ್ನೂವರೆಗೂ ಪ್ರಯತ್ನ ಮಾಡುತ್ತಿದ್ದರೆ ಅವ್ಯಕ್ತ ಆಕರ್ಷಣೆಯ ಅನುಭವ ಯಾವಾಗ ಮಾಡುವಿರಿ ಎಲ್ಲಿಯವರೆಗೂ ಪ್ರಯತ್ನವಿದೆಯೋ ಅಲ್ಲಿಯವರೆಗೆ ಆಕರ್ಷಣೆ ತಮ್ಮಲ್ಲಿ ಬರಲಾರದು. ಭಾಷೆಯೇ ದುರ್ಬಲತೆಯದು, ಸರ್ವಶಕ್ತಿವಂತ ತಂದೆಯ ಮಕ್ಕಳು ಹೀಗೆ ಹೇಳಬಾರದು. ಅವರ ಸಂಕಲ್ಪ, ವಾಣಿ ಎಲ್ಲವೂ ನಿಶ್ಚಯದ್ದಾಗಿರುತ್ತದೆ. ಇಂತಹ ಸ್ಥಿತಿಯಾಗಬೇಕು, ಸಂಕಲ್ಪರೂಪದ ತಳಹದಿ ಗಟ್ಟಿಯಾಗಿದೆಯಾ ಎಂದು ಸದಾ ಪರಿಶೀಲನೆ ಮಾಡಿಕೊಳ್ಳಿ. ತೀವ್ರ ಪುರುಷಾರ್ಥಿಯ ನಡತೆಯಲ್ಲಿ ಅವರ ಸಂಕಲ್ಪ, ವಾಣಿ, ಕರ್ಮ ಮೂರು ಒಂದೇ ಸಮಾನವಾಗಿರುವ ವಿಶೇಷತೆಯಿರುವುದು. ಸಂಕಲ್ಪ ಉನ್ನತವಾಗಿದ್ದು ಕರ್ಮ

ದುರ್ಬಲವಾಗಿದ್ದರೆ ಅವರನ್ನು ತೀವ್ರ ಪುರುಷಾರ್ಥಿ ಎಂದು ಹೇಳುವುದಿಲ್ಲ. ಮೂರರ ಸಮಾನತೆಯಿರಬೇಕು ಎಂಬುದನ್ನು ಸದಾ ತಿಳಿಯಬೇಕು. ಮಾಯೆ ಒಮ್ಮೊಮ್ಮೆ ತನ್ನ ರೂಪವನ್ನು ತೋರಿಸುತ್ತದೆ, ಸದಾಕಾಲಕ್ಕೆ ವಿದಾಯಿ ತೆಗೆದುಕೊಳ್ಳಲು ಬರುತ್ತದೆ. ವಿದಾಯದ ಬದಲು ಅದಕ್ಕೆ ನಿಮಂತ್ರಣ ಕೊಡುತ್ತೀರಿ. ಸದಾ ಶಿವತಂದೆಯ ಜೊತೆಗೆ ಇದ್ದೇನೆ, ಅವರಿಂದ ಬೇರೆಯಾಗದಿದ್ದಾಗ ಯಾರು ಏನು ಮಾಡುತ್ತಾರೆ? ಯಾರಾದರೂ ವ್ಯಸ್ತರಾಗಿದ್ದಾಗ ಮೂರನೆಯವರು ತೊಂದರೆ ಕೊಡುವುದಲ್ಲ. ತೊಂದರೆ ಕೊಡುವವರು ಯಾರೂ ಬರಬಾರದು (ಡೋಂಟ್ ಡಿಸ್ಟರ್ಬ್)ಎಂದು ಒಂದು ಬೋರ್ಡ್ ಹಾಕುತ್ತಾರೆ. ತಾವೂ ಸಹ ಅಂತಹದೇ ಒಂದು ಬೋರ್ಡನ್ನು ಹಾಕಿ ಆಗ ಮಾಯೆ ವಾಪಸ್ಸು ಹೋಗುವುದು, ಬರಲು ಸ್ಥಳವೇ ಸಿಗುವುದಿಲ್ಲ. ಕುರ್ಚಿ ಖಾಲಿಯಿದ್ದರೆ ಯಾರಾದರೂ ಕುಳಿತುಕೊಳ್ಳುತ್ತಾರೆ.

ಮಾತೆಯರಿಗಂತೂ ಕೇವಲ ತಂದೆಯನ್ನು ನೆನಪು ಮಾಡುವುದು ಬಹಳ ಸಹಜವಾಗಿದೆ. ತಂದೆಯನ್ನು ನೆನಪು ಮಾಡುವುದರಿಂದ ಜ್ಞಾನ ತಾನೇ ಪ್ರಕಟವಾಗುತ್ತದೆ, ಪ್ರತಿಯೊಂದು ಕಾರ್ಯದಲ್ಲಿ ಸಹಯೋಗ ಸಿಗುತ್ತದೆ. ಇಲ್ಲಿ ಪಡೆದ ಅನುಭವವನ್ನು ಅಲ್ಲಿ ನೆನಪಿಗೆ ತಂದರೆ, ಅವಿನಾಶಿಯಾಗಿ ಬಿಡುತ್ತೀರಿ. ನೆನಪಿನಲ್ಲಿ ಇಷ್ಟೊಂದು ಶಕ್ತಿಯಿದೆ. ಬುದ್ಧಿಯಲ್ಲಿ ಮತ್ತೆ-ಮತ್ತೆ ನಾವು ಪರಂಧಾಮ ನಿವಾಸಿ ಎಂಬುದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ ಕರ್ತವ್ಯಕ್ಕಾಗಿ ಇಲ್ಲಿಗೆ ಬಂದಿದ್ದೇವೆ ಮತ್ತೆ ವಾಪಸ್ಸು ಹೋಗಬೇಕು. ಎಷ್ಟು ಬುದ್ಧಿಯನ್ನು ಈ ಮಾತುಗಳಲ್ಲಿ ವ್ಯಸ್ತ ಮಾಡಿಕೊಳ್ಳುತ್ತೀರೋ ಅಷ್ಟು ಬುದ್ಧಿಯ ಅಲೆದಾಡುವಿಕೆಯಿರುವುದಿಲ್ಲ. ಜ್ಞಾನವನ್ನು ಯುಕ್ತಿಯಿಂದ ಯಾರಿಗಾದರೂ ಕೊಡಬೇಕು. ನೇರವಾಗಿ ಜ್ಞಾನ ಕೇಳುವುದರಿಂದ ಭಯಪಡುತ್ತಾರೆ. ಮೊದಲು ಈಶ್ವರೀಯ ಸ್ನೇಹದಲ್ಲಿ ಆಕರ್ಷಿಸಬೇಕು. ಶರೀರಧಾರಿಗಳಿಗೆ ಧನ ಬೇಕು, ತಂದೆಗೆ ಮನ ಬೇಕು. ಹಾಗಾದರೆ ಮನಸ್ಸನ್ನು ಎಲ್ಲಿಡಬೇಕೋ ಅಲ್ಲಿರಲಿ, ಮತ್ತೆಲ್ಲಿಯೂ ಪ್ರಯೋಗವಾಗದಿರಲಿ. ಯೋಗಯುಕ್ತ ಅವ್ಯಕ್ತ ಸ್ಥಿತಿಯಲ್ಲಿದ್ದು ಎರಡು ಶಬ್ದ ಹೇಳುವುದೂ ಭಾಷಣ ಮಾಡುವುದೇ ಆಗಿದೆ. ಒಂದು ಗಂಟೆಯ ಭಾಷಣದ ಸಾರ ಎರಡು ಶಬ್ದಗಳಲ್ಲಿ ಹೇಳಬಹುದು.

ದಿನದಿನಕ್ಕೆ ಹೆಜ್ಜೆಗಳು ಮುಂದೆ ಹೋಗುತ್ತಿವೆ ಎಂದು ತಿಳಿಯುತ್ತೀರಾ? ಇನ್ನೂ ಸಮಯ ಬಹಳವ ಇದೆ, ಪುರುಷಾರ್ಥ ಮಾಡಿದರಾಯಿತು ಎಂದು ತಿಳಿಯಬೇಡಿ. ಆದರೆ ಸಮಯದ ಮೊದಲೇ ಸಮಾಪ್ತಿ ಮಾಡಿ ಸ್ಥಿತಿಯ ಅನುಭವ ಮಾಡಿಕೊಳ್ಳಬೇಕು. ಸಮಯ ಬಂದಾಗ ಈ ಸ್ಥಿತಿಯ ಅನುಭವ ಮಾಡಿದರೆ ಸಮಯದ ಜೊತೆಗೆ ಸ್ಥಿತಿಯೂ ಬದಲಾಗುತ್ತದೆ. ಸಮಯ ಸಮಾಪ್ತಿಯಾದಾಗ ಅವ್ಯಕ್ತ ಸ್ಥಿತಿಯ ಅನುಭವ ಸಮಾಪ್ತಿಯಾಗಿ ಇನ್ನೊಂದು ಪಾತ್ರ ಸಿಗುವುದು. ಆದ್ದರಿಂದ ಮೊದಲೇ ಅವ್ಯಕ್ತ ಸ್ಥಿತಿಯ ಅನುಭವ ಮಾಡಬೇಕು. ಕುಮಾರಿಯರು ಓಡಾಡುವುದರಲ್ಲಿ ಚುರುಕಾಗಿರುತ್ತಾರೆ. ಹಾಗಾದರೆ ಈ ಈಶ್ವರೀಯ ಓಟದಲ್ಲಿಯೂ ತೀವ್ರವಾಗಿ ಹೋಗಬೇಕು. ಮೊದಲು ಬರುವವರೇ ಸಮೀಪದಲ್ಲಿರುವರು. ಹೇಗೆ ಸಾಕಾರದಲ್ಲಿ ಮೊದಲು ಹೋದರಲ್ಲವೇ? ಮೊದಲಿಗರ ಗುರಿ ಉನ್ನತವಾಗಿರಬೇಕು, ಗುರಿ ಸಂಪೂರ್ಣವಾಗಿದ್ದರೆ ಪುರುಷಾರ್ಥವನ್ನು ಸಂಪೂರ್ಣ ಮಾಡಬೇಕು, ಆಗಲೇ ಸಂಪೂರ್ಣ ಪದವಿ ಸಿಗುತ್ತದೆ. ಸಂಪೂರ್ಣ ಪುರುಷಾರ್ಥ ಎಂದರೆ ಎಲ್ಲಾ ವಿಷಯಗಳಲ್ಲಿ ತಮ್ಮನ್ನು ಸಂಪನ್ನ ಮಾಡಿಕೊಳ್ಳುವುದು. ದೊಡ್ಡ ಮಾತೇನಲ್ಲ. ತಿಳಿದ ಮೇಲೆ ನೆನಪು ಮಾಡುವುದು ಕಷ್ಟವಾಗುತ್ತದೆಯೇ? ತಿಳಿಯುವುದನ್ನೇ ಜ್ಞಾನ ಎಂದು ಹೇಳಲಾಗುತ್ತದೆ. ಜ್ಞಾನವಿದೆ ಆದರೆ ಪ್ರಕಾಶ ಮತ್ತು ಶಕ್ತಿಯಿಲ್ಲವೆಂದರೆ ಆ ಜ್ಞಾನ ಯಾವ ಕೆಲಸಕ್ಕೆ? ಅದನ್ನು ತಿಳಿಯುವುದು ಎಂದು ಕರೆಯಲಾಗುವುದಿಲ್ಲ. ಇಲ್ಲಿ ತಿಳಿಯುವುದು ಮತ್ತು ಮಾಡುವುದು ಸಮಾನವಾಗಿರಬೇಕು. ಬೇರೆಯವರಲ್ಲಿ ತಿಳಿಯುವುದು ಮತ್ತು ಮಾಡುವುದರಲ್ಲಿ ಅಂತರವಿರುತ್ತದೆ. ಜ್ಞಾನ ಎಂತಹದಾಗಿದೆ ಎಂದರೆ ಅದು ರೂಪವನ್ನು ತಯಾರು ಮಾಡುತ್ತದೆ. ಹಾಗಾದರೆ ಈಶ್ವರೀಯ ಜ್ಞಾನ ಯಾವ ರೂಪ ತಯಾರು ಮಾಡುತ್ತದೆ? ಈಶ್ವರೀಯ ಸ್ಥಿತಿ, ಹಾಗಾದರೆ ಈಶ್ವರೀಯ ಜ್ಞಾನ ಪಡೆಯುವವರು ಈಶ್ವರೀಯ ರೂಪದಲ್ಲಿ ಏಕೆ ಬರುವುದಿಲ್ಲ. ಜ್ಞಾನವನ್ನು ಓದುವುದು ಬೇರೆ ವಿಷಯ. ತಿಳಿಯುವುದು ಎಂದರೆ ಬುದ್ಧಿಯಲ್ಲಿ ಧಾರಣೆ ಮಾಡುವುದು ಬೇರೆ ವಿಷಯ. ಧಾರಣೆಯಿಂದ ಕರ್ಮ ತಾನಾಗಿಯೇ ಆಗುತ್ತದೆ. ಧಾರಣೆಯ ಅರ್ಥವೇ ಆಗಿದೆ ಆ ಮಾತನ್ನು ಬುದ್ಧಿಯಲ್ಲಿ ಅಳವಡಿಸಿಕೊಳ್ಳುವುದು, ಯಾವಾಗ ಬುದ್ಧಿಯಲ್ಲಿ ಸಮಾವೇಶಗೊಳ್ಳುವುದೋ ಆದೇಶದನುಸಾರ ಕರ್ಮೇಂದ್ರಿಯಗಳು ಅದನ್ನೇ ಮಾಡುವವು. ನಾವು ಜ್ಞಾನಸಂಪನ್ನ ತಂದೆಯ ಮಕ್ಕಳಾಗಿದ್ದೇವೆ ಮತ್ತು ಈಶ್ವರೀಯ ಜ್ಞಾನದ ಪ್ರಕಾಶ ಮತ್ತು ಶಕ್ತಿ ನಮಗಿದೆ. ಈ ರೀತಿ ತಿಳಿದು ನಡೆಯಬೇಕು.

ಜ್ಞಾನವನ್ನು ಕೇವಲ ಕೇಳುವುದಲ್ಲ ಆದರೆ ಅದನ್ನು ಅಳವಡಿಸಿಕೊಳ್ಳಬೇಕು. ಭೋಜನ ಮಾಡುವುದು ಬೇರೆ, ಅದನ್ನು ಜೀರ್ಣಿಸಿಕೊಳ್ಳುವುದು ಬೇರೆ. ತಿನ್ನುವುದರಿಂದ ಶಕ್ತಿ ಬರುವುದಿಲ್ಲ. ಭೋಜನವನ್ನು ಜೀರ್ಣಿಸಿಕೊಳ್ಳುವುದರಿಂದ ಶಕ್ತಿರೂಪವಾಗುತ್ತದೆ. ಶಕ್ತಿವಂತ ತಂದೆಯ ಮಕ್ಕಳು ಮತ್ತು ಏನೂ ಮಾಡಲಾಗುವುದಿಲ್ಲವೆಂದರೆ ಹೇಗೆ ಸಾಧ್ಯ? ತಂದೆಯ ಹೆಸರಿಗೆ ನಾಚಿಕೆಯಾಗುತ್ತದೆ. ನಾವು ಉದಾಹರಣೆ ಆಗುವಂತಹ ಕರ್ಮಗಳನ್ನು ಸದಾ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಳ್ಳಬೇಕು. ನಿರೀಕ್ಷೆಯಲ್ಲಿರಬಾರದು ಆದರೆ ಉದಾಹರಣೆಯಾಗಬೇಕು. ತಂದೆಯು ಉದಾಹರಣೆ ಆದರಲ್ಲವೇ?

ತಮ್ಮ ಮನೆಗೆ ಬಂದಿರುವಿರೆಂದು ತಿಳಿಯುತ್ತೀರಾ? ಅಲೆದಾಡುವವನು ತನ್ನ ಮನೆ ತಲುಪಿದಾಗ ವಿಶ್ರಾಮ ಸಿಗುತ್ತದೆ. ಹಾಗಾದರೆ ಇಲ್ಲಿಯೂ ವಿಶ್ರಾಮದ ಅನುಭವವಾಗುತ್ತದೆಯೇ? ಸ್ಥಾನ ಸಿಕ್ಕಾಗ ವಿಶ್ರಾಮದ ಸ್ಥಿತಿಯಾಗುತ್ತದೆ. ಸದಾ ವಿಶ್ರಾಮದ ಸ್ಥಿತಿಯೆಂದು ತಿಳಿಯಿರಿ, ಕೆಲಸದ ನಿಮಿತ್ತ ಹೋದರೂ ಈ ಸ್ಥಿತಿಯ ಅನುಭವ ಜೊತೆಗೆ ತೆಗೆದುಕೊಂಡು ಹೋಗಿರಿ. ಇದನ್ನು ಜೊತೆಗೆ ಇಟ್ಟುಕೊಂಡರೆ ಎಷ್ಟೇ ಕೆಲಸ ಮಾಡಿದರೂ ವಿಶ್ರಾಮದ ಸ್ಥಿತಿಯಿರುವುದು. ವಿಶ್ರಾಮದ ಸ್ಥಿತಿಯಲ್ಲಿ - ಶಾಂತಿ ಸುಖದ ಅನುಭವವಾಗುತ್ತದೆ. **ತಮ್ಮಲ್ಲಿ ಶಕ್ತಿ ಬಂದಾಗ ವಾತಾವರಣದ ಪ್ರಭಾವ ತಮ್ಮ ಮೇಲೆ ಆಗುವುದಿಲ್ಲ ಆದರೆ ತಮ್ಮ ಪ್ರಭಾವ ವಾತಾವರಣದ ಮೇಲೆ ಆಗುತ್ತದೆ ವಾತಾವರಣ ಸರ್ವಶಕ್ತಿವಂತವಾಗಿದೆಯೋ ಅಥವಾ ತಂದೆಯೋ? ಸರ್ವಶಕ್ತಿವಂತ ತಂದೆಯ ಮಕ್ಕಳಾಗಿದ್ದಾಗ ವಾತಾವರಣ ನಿಮಗಿಂತಲೂ ಹೇಗೆ ಶಕ್ತಿಶಾಲಿಯಾಗಲು ಸಾಧ್ಯ? ತಮ್ಮ ಶಕ್ತಿಯನ್ನು ಮರೆತಿರುವುದರಿಂದ ವಾತಾವರಣದ ಪ್ರಭಾವ ನಿಮ್ಮ ಮೇಲೆ ಆಗುತ್ತಿದೆ.** ವೈದ್ಯ ಎಂತಹದೇ ರೋಗಿಯ ಬಳಿಗೆ ಹೋದರೂ ಅವರ ಮೇಲೆ ಪ್ರಭಾವವಾಗುವುದಿಲ್ಲ. ಅದರಂತೆಯೇ ತಮ್ಮ ಸ್ಮೃತಿಯನ್ನಿಟ್ಟುಕೊಂಡು ಸೇವೆಯನ್ನು ಮಾಡಬೇಕು. ನಾವು ವಾತಾವರಣವನ್ನು ತಯಾರು ಮಾಡಬೇಕೇ ಹೊರತು ವಾತಾವರಣ ನಮ್ಮನ್ನಲ್ಲ ಎಂಬ ಶಕ್ತಿಯನ್ನು ಇಟ್ಟುಕೊಳ್ಳಿ. ಯುಗಲ್ ಆಗಿದ್ದರೂ ಒಬ್ಬಂಟಿಯಾಗಿ ಆತ್ಮನ ಸ್ಮೃತಿಯಲ್ಲಿ ಇರುತ್ತೀರಾ? ಆತ್ಮ ಒಂಟಿಯಲ್ಲವೇ? ಒಂದು ವೇಳೆ ಆತ್ಮ ಸಂಬಂಧದಲ್ಲಿ ಬರಬೇಕಾದರೆ ಯಾರ ಜೊತೆಗೆ? ಸರ್ವಸಂಬಂಧ ಯಾರೊಂದಿಗಿದೆ? ಒಬ್ಬನೊಂದಿಗೆ. ಹಾಗಾದರೆ ಒಂದರಿಂದ ಎರಡದಾಗ ಬೇಕೆಂದರೆ ತಂದೆ ಮತ್ತು ಮಕ್ಕಳು. ಮೂರನೆಯ ಸಂಬಂಧವಿಲ್ಲ. ಸರ್ವ ಸಂಬಂಧ ಒಬ್ಬನೊಂದಿಗೆ ಜೋಡಿಸಬೇಕು. ಒಬ್ಬರಿಂದ ಇನ್ನೊಬ್ಬರು ಅರ್ಥಾಥ್ ಸದಾ ನನ್ನ ಜೊತೆಯಿರುವವರು ಶಿವತಂದೆ. ಈ ಸ್ಥಿತಿಯನ್ನೇ ಉನ್ನತ ಸ್ಥಿತಿ ಎಂದು ಹೇಳಲಾಗುವುದು. ಮೂರನೆಯ ಯಾವುದೇ ವಸ್ತುವನ್ನು ನೋಡಿದರೂ ನೋಡದಂತಿರಬೇಕು ಒಂದು ವೇಳೆ ನೋಡಬೇಕಾದರೆ ಒಬ್ಬರನ್ನೇ ನೋಡಬೇಕು. ಮಾತನಾಡಬೇಕಾದರೆ ಅವರೊಂದಿಗೇ ಮಾತನಾಡಬೇಕು. ಈ ರೀತಿಯಾದ ಸ್ಥಿತಿಯಿಂದಲೇ ಮಾಯಾಜೀತ್ ಮತ್ತು ಜಗಜ್ಜೀತರಾಗುವರಿ. ಈ ಶುದ್ಧ ಸ್ನೇಹ ಇಡೀ ಕಲ್ಪದಲ್ಲಿ ಒಂದೇ ಬಾರಿ ಸಿಗುತ್ತದೆ. ಇಂತಹ ಸ್ನೇಹವನ್ನು ನಾವು ಪಡೆಯುತ್ತೇವೆ ಎಂಬುದನ್ನು ಸದಾ ನೆನಪಿಡಬೇಕು. ಯಾವುದು ಯಾರಿಗೂ ಸಿಗದಿರುವುದು ನಮಗೆ ಸಿಕ್ಕಿದೆ. ಇದೇ ನಶೆ ಮತ್ತು ನಿಶ್ಚಯದಲ್ಲಿರಬೇಕು. ದಿಲ್ಲಿಯಲ್ಲಿ ಅದ್ಭುತವನ್ನು ಯಾವಾಗ ಮಾಡುತ್ತೀರಿ? ದಿಲ್ಲಿಯ ಧ್ವನಿಯೇ ನಾಲ್ಕೂ ಕಡೆ ವ್ಯಾಪಿಸುತ್ತದೆ. ದಿಲ್ಲಿಯಲ್ಲಿ ಹೆಸರು ಪ್ರತ್ಯಕ್ಷ ವಾಗುವುದು, ಅರ್ಥಾತ್ ಭಾರತದಲ್ಲಿ ಹೆಸರು ಪ್ರಸಿದ್ಧವಾಗಬೇಕು.

ಇಷ್ಟು ಜವಾಬ್ದಾರಿಯನ್ನು ದಿಲ್ಲಿಯವರು ತೆಗೆದುಕೊಳ್ಳಬೇಕು. ಸಮಯ ಕಡಿಮೆಯಿದೆ ಸೇವೆ ಬಹಳ ಇದೆ. ಇದೇ ಗತಿಯಿಂದ ಸೇವೆ ಮಾಡಿದರೆ ಎಲ್ಲರಿಗೂ ಸಂದೇಶ ತಲುಪುವುದು, ಯಾರಿಗಾದರೂ ಧನವಂತರಾಗಲು ಅವಕಾಶ ಕೊಡುವುದೂ ಸಹ ಮಹಾದಾನವಾಗಿದೆ, ಮಹಾದಾನದ ಫಲವೂ ಅಷ್ಟೇ ಸಿಗುತ್ತದೆ. ತಂದೆಯನ್ನು ಸದಾ ಜೊತೆಗೆ ಇಟ್ಟುಕೊಂಡರೆ ಇವರ ಜೊತೆಗೆ ಸರ್ವಶಕ್ತಿವಂತ ತಂದೆಯಿದ್ದಾರೆ ಎಂದು ತಿಳಿದು ಮಾಯೆ ದೂರ ಓಡಿ ಹೋಗುವುದು. ಒಂಟಿಯಾಗಿ ನೋಡಿದಾಗ ಸಾಹಸವಿಟ್ಟುಕೊಳ್ಳುತ್ತದೆ. ಬೇಟೆಯಾಡಲು ಬಂದಾಗ ಯಾವುದೇ ಪ್ರಾಣಿ ಆಕ್ರಮಣ ಮಾಡಬಾರದೆಂದು ಬೆಂಕಿ ಉರಿಸುತ್ತಾರೆ. ಅದೇ ರೀತಿ ನೆನಪಿನ ಅಗ್ನಿ ಉರಿಯುತ್ತಿದ್ದರೆ ಮಾಯೆ ಬರಲಾರದು. ಈ ನೆನಪಿನ ಅಗ್ನಿ ನಂದಬಾರದು. ಜೊತೆಗಿರುವುದರಿಂದ ಶಕ್ತಿ ತನ್ನಿಂದ ತಾನೇ ಬರುವುದು. ಆಗ ವಿಜಯವೇ ವಿಜಯ.

ಬಾಪ್ ದಾದಾರಿಗೆ ವಯಸ್ಸಾದ ಮಾತೆಯರು ಬಹಳ ಪ್ರಿಯರು ಏಕೆಂದರೆ ಬಹಳ ದುಃಖದಿಂದ ದಣಿದಿದ್ದಾರೆ. ಆದ್ದರಿಂದ ದಣಿದ ಮಕ್ಕಳ ಬಗೆಗೆ ತಂದೆಗೆ ಸ್ನೇಹವಿರುತ್ತದೆ. ಇಷ್ಟು ಸ್ನೇಹವನ್ನು ಮಕ್ಕಳೂ ಇಟ್ಟುಕೊಳ್ಳಬೇಕು. ಮನೆಯಲ್ಲಿಯೇ ಇದ್ದು ನೆನಪಿನ ಯಾತ್ರೆಯಲ್ಲಿ ಪಾಸಾದರೂ ಮುಂದುವರೆಯಬಹುದು. ಎಷ್ಟು ನೆನಪಿನ ಯಾತ್ರೆಯಲ್ಲಿ ಸಫಲರಾಗುವಿರೋ ಅಷ್ಟು ಮನಸ್ಸಿನ ಭಾವನೆಗಳು ಶುದ್ಧವಾಗುವವು. ಈಗ ಸೇವೆಯಲ್ಲಿ ಸಹಯೋಗಿ ಆಗಿದ್ದೀರಲ್ಲವೇ? ಎಷ್ಟು ಬೇರೆಯವರಿಗೆ ಸಂದೇಶ ಕೊಡುವಿರೋ ಅಷ್ಟು ತಮ್ಮನ್ನು ಸಂಪೂರ್ಣ ಮಾಡಿಕೊಳ್ಳಬಹುದು. ಏಕೆಂದರೆ ಬೇರೆಯವರಿಗೆ ತಿಳಿಸುವುದರಿಂದ ಇಚ್ಛೆಯಿಲ್ಲದಿದ್ದರೂ ತಮ್ಮನ್ನು ಸಂಪೂರ್ಣ ಮಾಡಿಕೊಳ್ಳುವ ಕಡೆಗೆ ಗಮನವಿರುವುದು. ಈ ಸೇವೆ ತಮ್ಮನ್ನು ಸಂಪೂರ್ಣ ಮಾಡಿಕೊಳ್ಳುವ ಮಧುರ ಬಂಧನ. ಈ ಬಂಧನದಲ್ಲಿ ತಮ್ಮನ್ನು ತಾವು ಎಷ್ಟು ಬಂಧಿಸಿಕೊಳ್ಳುವಿರೋ ಅಷ್ಟು **ಸರ್ವಸಂಬಂಧಗಳಿಂದ ಮುಕ್ತರಾಗುವಿರಿ. ಸರ್ವಬಂಧನಗಳಿಂದ ಮುಕ್ತರಾಗುವ ಸಾಧನವೇನಾಯಿತು? ಒಂದು ಬಂಧನದಲ್ಲಿ ತಮ್ಮನ್ನು ಬಂಧಿಸಿಕೊಳ್ಳುವುದು. ಈ ಮಧುರ ಬಂಧನವೂ ಈಗಿನದಾಗಿದೆ ನಂತರ ಎಂದೂ ಇರುವುದಿಲ್ಲ.** ಎಲ್ಲರೂ ಈ ಈಶ್ವರೀಯ ಬಂಧನದಲ್ಲಿ ಬಂಧಿಸಲ್ಪಟ್ಟ ಆತ್ಮರಾಗಿದ್ದೀರಿ. ಶ್ರೇಷ್ಠ ಕರ್ಮ ಮಾಡುವುದರಿಂದಲೇ ಶ್ರೇಷ್ಠ ಪದವಿ ಸಿಗುವುದು ಮತ್ತು ಶ್ರೇಷ್ಠ ಆಚಾರದವರಾಗುವಿರಿ. ಒಂದು ಶ್ರೇಷ್ಠ ಕರ್ಮದಿಂದ ವರ್ತಮಾನ ಮತ್ತು ಭವಿಷ್ಯವೂ ಶ್ರೇಷ್ಠವಾಗುವವು. ಯಾವುದರಿಂದ ಎರಡೂ ಶ್ರೇಷ್ಠವಾಗುವವೋ ಆ ಕರ್ಮ ಮಾಡಬೇಕು. ಅಹಮದಾಬಾದ್ ನವರು ಎಲ್ಲರಿಗಿಂತ ಹೆಚ್ಚು ಸೇವೆ ಮಾಡಬೇಕು ಏಕೆಂದರೆ ಅಹಮದಾಬಾದ್ ಎಲ್ಲ ಸೇವಾಕೇಂದ್ರಗಳ ಬೀಜ ರೂಪವಾಗಿದೆ. ಬೀಜದಲ್ಲಿ ಶಕ್ತಿಯಿರುತ್ತದೆ. ಗಾಢ ನಿದ್ರೆಯಲ್ಲಿರುವವರನ್ನು ಎಚ್ಚರಿಸುವಂತೆ ಜೋರಾಗಿ ಘರ್ಜನೆ ಮಾಡಿ. ಕುಮಾರಿಯರು ಬಹಳ ಅದ್ಭುತಗಳನ್ನು ಮಾಡಬಹುದು. ಒಬ್ಬ ಕುಮಾರಿಯಲ್ಲಿ ಎಷ್ಟು ಶಕ್ತಿಯಿದೆಯೋ ಅಷ್ಟು ಸೇವೆಯಲ್ಲಿ ಸಫಲತೆ ಕಂಡುಬರಬೇಕು. ಕುಮಾರಿಯರು ಪುರುಷಾರ್ಥದಲ್ಲಿ ಸೇವೆಯಲ್ಲಿ ಎಲ್ಲರಿಗಿಂತ ತೀವ್ರವಾಗಿ ಹೋಗಬಹುದು. ಶಕ್ತಿಯರು ಸೇವೆಯಲ್ಲಿ ಮುಂದಿದ್ದಾರೋ ಅಥವಾ ಪಾಂಡವರೋ? ನಾವು ಕಲ್ಪದ ಹಿಂದೆಯೂ ಪಾಂಡವರ ಸ್ಮೃತಿಚಿಹ್ನೆ ಇದೆ. ಎಷ್ಟು ಬಾರಿ ಪಾಂಡವರಾಗಿದ್ದೀರೋ ಆ ಅಗಣಿತವಾದದ್ದು ಪಕ್ಕಾ ನೆನಪಿರುತ್ತದೆಯಲ್ಲವೇ? ಈ ಸ್ಮೃತಿಯಿದ್ದರೆ ಎಂದಿಗೂ ವಿಸ್ಮೃತಿ ಆಗುವುದಿಲ್ಲ, ಕಲ್ಪದ ಮೊದಲೂ ಸಹ ನಾವೇ ಇದ್ದೆವು ಈಗಲೂ ನಾವೇ ಇದ್ದೇವೆ ಎಂಬ ನಶೆ ಮತ್ತು ನಿಶ್ಚಯ ಇರಬೇಕು. ನಾವೇ ಹಕ್ಕುದಾರರಾಗಿದ್ದೇವೆ. ಯಾವುದಕ್ಕೆ? ಅತಿ ಶ್ರೇಷ್ಠ ತಂದೆಗೆ.. ಇದು ನೆನಪಿರುವುದರಿಂದ ಸದಾ ಏಕರಸ ಸ್ಥಿತಿಯಿರುತ್ತದೆ. ಒಬ್ಬನ ನೆನಪಿನಲ್ಲಿರುವುದರಿಂದಲೇ ಏಕರಸ ಸ್ಥಿತಿಯಿರುತ್ತದೆ.

ಅವ್ಯಕ್ತದಲ್ಲಿ ಸೇವೆ ಹೇಗೆ ಆಗುತ್ತದೆ ಎಂಬ ಅನುಭವ ಆಗುತ್ತದೆಯೇ? ಅವ್ಯಕ್ತದಲ್ಲಿ ಸೇವೆಯ ಜೊತೆ ಹೇಗೆ ಸದಾ ಇರುತ್ತದೆ ಎಂಬುದು ಅನುಭವವಾಗುತ್ತದೆಯೇ? ಸ್ನೇಹಿ ಆತ್ಮರ ಪ್ರತಿ ಕ್ಷಣವೂ ಜೊತೆಗಿದ್ದೇನೆ ಎಂಬ ವಾಯಿದೆಯಂತೆ ಸದಾ ಜೊತೆಯ ಅನುಭವವಾಗುತ್ತದೆಯೇ? ಕೇವಲ ರೂಪ ಬದಲಾಗಿದೆ ಆದರೆ ಕರ್ತವ್ಯ ಅದೇ ನಡೆಯುತ್ತಿದೆ. ಯಾರೆಲ್ಲ ಸ್ನೇಹಿ ಮಕ್ಕಳಿದ್ದಾರೋ ಅವರ ಮೇಲೆ ಛತ್ರಛಾಯೆಯ ಇರುತ್ತದೆ. ಛತ್ರಛಾಯೆಯ ಕೆಳಗೆ ಎಲ್ಲಾ ಕಾರ್ಯಗಳೂ ನಡೆಯುತ್ತಿವೆ ಎಂದು ಅನುಭವವಾಗುತ್ತದೆಯೇ? ಏಣಿಯನ್ನು ಇಳಿಯುವುದು ಮತ್ತು ಏರುವುದು ಅಭ್ಯಾಸವಾದಂತೆ ವ್ಯಕ್ತದಿಂದ ಅವ್ಯಕ್ತ, ಅವ್ಯಕ್ತದಿಂದ ವ್ಯಕ್ತದಲ್ಲಿ ಬರುವ ಅಭ್ಯಾಸವಾಗಿದೆಯೇ?. ಈಗೀಗ ಇಲ್ಲಿ, ಈಗೀಗ ಅಲ್ಲಿ, ಹೀಗೆ ಯಾರ ಸ್ಥಿತಿಯಾಗುತ್ತದೆಯೋ, ಅಭ್ಯಾಸವಾಗುತ್ತದೆಯೋ ಅವರಿಗೆ ಈ ವ್ಯಕ್ತ ದೇಶವೂ ಅವ್ಯಕ್ತವೆನಿಸುತ್ತದೆ. ಸ್ಮೃತಿ ಮತ್ತು ದೃಷ್ಟಿ ಬದಲಾಗುತ್ತದೆ. ಎಲ್ಲರೂ ಸದಾ ಸಿದ್ಧರಾಗಿ ಕುಳಿತಿರುವಿರಾ? ಯಾವುದೇ ದೇಹದ ಲೆಕ್ಕಾಚಾರದಿಂದಲೂ ಹಗುರ. ಆರಂಭದಲ್ಲಿ ವತನದಲ್ಲಿ ಹಕ್ಕಿಗಳ ಆಟವನ್ನು ತೋರಿಸುತ್ತಿದ್ದರು, ಪಕ್ಷಿಗಳನ್ನು ಹಾರಿಸುತ್ತಿದ್ದರು. ಅದೇ ರೀತಿ ಈ ಆತ್ಮ ಪಕ್ಷಿ ಯಾವಾಗ ಬೇಕೋ ಆಗ ಹಾರಬಹುದು. ಅಭ್ಯಾಸವಿದ್ದಾಗಲೇ ಅದು ಸಾಧ್ಯ. ಸ್ವಯಂ ಹಾರುವ ಪಕ್ಷಿಯಾದಾಗ ಬೇರೆಯವರನ್ನೂ ಸಹ ಒಂದು ಕ್ಷಣದಲ್ಲಿ ಹಾರಿಸಬಹುದು. ಈಗ ಸಮಯ ಬೇಕಾಗುತ್ತದೆ. ಪರೋಕ್ಷ ರೀತಿಯಿಂದ ವತನದ ಅನುಭವ ಹೇಳಿದೆವು. ಪರೋಕ್ಷ ರೂಪದಲ್ಲಿ ಎಷ್ಟು ಸಮಯ ವತನದಲ್ಲಿ ಜೊತೆಗಿರುತ್ತೀರಿ? ಹೇಗೆ ಈ ಸಮಯ ಯಾರೊಂದಿಗೆ ಸ್ನೇಹವಿದೆಯೋ ಅವರು ವಿದೇಶದಲ್ಲಿದ್ದರೂ ಅವರ ಮನಸ್ಸು ಹೆಚ್ಚು ಆ ಕಡೆಗೆ ಇರುತ್ತದೆ. ಯಾವ ದೇಶದಲ್ಲಿ ಅವರಿರುತ್ತಾರೆಯೋ ಆ ದೇಶವಾಸಿಯೆಂದು ತಿಳಿದುಕೊಳ್ಳುತ್ತಾರೆ. ಅದೇ ರೀತಿ ನೀವೀಗ ಸೂಕ್ಷ್ಮವತನವಾಸಿ ಆಗಬೇಕು. ಸೂಕ್ಷ್ಮ

ವತನವನ್ನು ಸ್ಥೂಲವತನದಲ್ಲಿ ಪ್ರಕಟ ಮಾಡುತ್ತೀರೋ ಅಥವಾ ತಾವೇ ಸೂಕ್ಷ್ಮ ವತನದಲ್ಲಿ ಜೊತೆಗಿರುವೆವೆಂದು ತಿಳಿಯುತ್ತೀರೋ? ಯಾವ ಅನುಭವವಿದೆ? ಸ್ಥೂಲ ವತನದಲ್ಲಿರುತ್ತಲೂ ಸೂಕ್ಷ್ಮವತನವಾಸಿ ಆಗುತ್ತಾರೆ, ಇದೂ ಸಹ ಸೂಕ್ಷ್ಮವತನದ ವಾತಾವರಣದಲ್ಲಿ ಸೂಕ್ಷ್ಮದಿಂದ ಸೇವೆಯನ್ನು ಪಡೆಯಬಹುದೆಂದು ಬಾಪ್ ದಾದಾ ತಿಳಿಯುತ್ತಾರೆ. ಅವ್ಯಕ್ತ ಸ್ಥಿತಿಯಲ್ಲಿದ್ದು ಸಹಯೋಗ ಪಡೆಯಬಹುದು. ವ್ಯಕ್ತ ರೂಪದಲ್ಲಿ ಅವ್ಯಕ್ತ ಸಹಯೋಗ ಸಿಗಲು ಸಾಧ್ಯವಿದೆ. ಈಗ ಹೆಚ್ಚು ಸಮಯ ತಮ್ಮನ್ನು ಫರಿಶ್ತೆ ಎಂದು ತಿಳಿಯಿರಿ. ಫರಿಶ್ತೆಗಳ ಜಗತ್ತಿನಲ್ಲಿರುವುದರಿಂದ ಸೂಕ್ಷ್ಮವತನವನ್ನು ಸ್ಥೂಲ ವತನದಲ್ಲಿಟ್ಟಂತೆ ಬಹಳ ಹಗುರತೆಯ ಅನುಭವವಾಗುವುದು. ಸ್ಥೂಲ ಮತ್ತು ಸೂಕ್ಷ್ಮದಲ್ಲಿ ಅಂತರವಿರುವುದಿಲ್ಲ. ಸಂಪೂರ್ಣ ಸ್ಥಿತಿಯಲ್ಲಿಯೂ ಅಂತರವಿರುವುದಿಲ್ಲ. ಈ ವ್ಯಕ್ತ ದೇಶ ಅವ್ಯಕ್ತ ದೇಶದಂತಾಗುವುದು. ಸಂಪೂರ್ಣತೆಗೆ ಸಮೀಪ ಬರುವಿರಿ, ಬಾಪ್ ದಾದಾ ಹೇಗೆ ವ್ಯಕ್ತದಲ್ಲಿ ಬಂದರೂ ಅವ್ಯಕ್ತ ರೂಪದ ಅವ್ಯಕ್ತ ದೇಶದ, ಅವ್ಯಕ್ತ ಪ್ರವಾಹದಲ್ಲಿ ಇರುತ್ತಾರೆಯೋ, ಅದನ್ನೇ ಮಕ್ಕಳಿಗೆ ಅನುಭವ ಮಾಡಿಸಲು ಬರುತ್ತಾರೆ. ಅದೇ ರೀತಿ ತಾವೆಲ್ಲರೂ ಸಹ ತಮ್ಮ ಅವ್ಯಕ್ತ ಸ್ಥಿತಿಯ ಅನುಭವ ಬೇರೆಯವರಿಗೆ ಮಾಡಿಸಿ. ಯಾವಾಗ ಅವ್ಯಕ್ತ ಸ್ಥಿತಿಯ ಸ್ಟೇಜ್ ಸಂಪೂರ್ಣವಾಗುವುದೋ ಆಗ ತಮ್ಮ ರಾಜ್ಯದಲ್ಲಿ ಜೊತೆಗೆ ಇರುತ್ತೀರಿ. ಸಾಕಾರ ರೂಪದಲ್ಲಿ ಕಂಡು ಬರುವಂತೆ ಒಂದು ಕಣ್ಣಿನಲ್ಲಿ ಅವ್ಯಕ್ತ ಸಂಪೂರ್ಣ ಸ್ಥಿತಿ ಇನ್ನೊಂದು ಕಣ್ಣಲ್ಲಿ ರಾಜ್ಯ ಪದವಿ ಸ್ಪಷ್ಟ ಕಂಡುಬರುವವು. ಈ ರೀತಿಯಾಗಿ ಈ ರೀತಿಯಾಗುವೆವು ಎಂದು ಬಾಲ್ಯದ ರೂಪ ಮತ್ತು ಸಂಪೂರ್ಣ ರೂಪವೂ ಸಹ ಸ್ಮೃತಿಗೆ ಬರುವುದು. ಭವಿಷ್ಯದ ರೂಪರೇಖೆಯೂ ಸಂಪೂರ್ಣವಾಗಿರುವಂತೆ ಕಂಡು ಬರುವುದು, ಎಷ್ಟೆಷ್ಟು ಫರಿಶ್ತೆಯ ಜೀವನಕ್ಕೆ ಸಮೀಪವಾಗುವಿರೋ ಅಷ್ಟಷ್ಟು ರಾಜ್ಯಪದವಿಯನ್ನೂ ಎದುರಿಗೆ ನೋಡುವಿರಿ. ಇತ್ತೀಚೆಗೆ ಕೆಲವರಿಗೆ ತಮ್ಮ ಭೂತಕಾಲ ಪೂರ್ಣ ಸ್ಮೃತಿಯಲ್ಲಿರುತ್ತದೆ. ಹಾಗಾದರೆ... ಹೀಗೇ ಆಗಬೇಕು ಎಂಬ ಈ ಭವಿಷ್ಯವೂ ಸಹ ಇದೇ ರೀತಿ ಸ್ಮೃತಿಯಲ್ಲಿರಲಿ, ಆ ಭವಿಷ್ಯದ ಸಂಸ್ಕಾರಗಳು ಪ್ರಕಟವಾಗುತ್ತಿರುತ್ತವೆ, ಗುಪ್ತವಾಗಿರುವುದಿಲ್ಲ.

ಅವ್ಯಕ್ತ ಮುರಳಿ 24-01-1970.

***ಬ್ರಾಹ್ಮಣರ ಮುಖ್ಯ ವ್ಯಾಪಾರ - ಸಮರ್ಪಣೆ ಮಾಡುವುದು ಮತ್ತು ಮಾಡಿಸುವುದು***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಶ್ರೀಮತದ ಅನುಸಾರ ನಡೆಯುತ್ತಾ ಪ್ರತಿ ಕರ್ಮದಲ್ಲಿ ಅಲೌಕಿಕತೆಯನ್ನು ತಂದಿರುವ ತಂದೆಯ ಆಸ್ತಿಗೆ ಪೂರ್ಣ ಅಧಿಕಾರಿ.

2. ನಾನು ದೇಹ, ದೇಹ ಸಂಬಂಧಗಳು, ದೇಹದ ವಸ್ತುಗಳಿಗೆ ಅಧಿಕಾರಿಯಾಗಿ ಮಾಯೆಯಿಂದ ನನ್ನನ್ನು ನಾನು ರಕ್ಷಿಸಿಕೊಂಡಿದ್ದೇನೆ.

3. ನಾನು ಅವ್ಯಕ್ತ ಸ್ಥಿತಿಯಿಂದ ಅವ್ಯಕ್ತ ಆನಂದ, ಅವ್ಯಕ್ತ ಸ್ನೇಹ, ಅವ್ಯಕ್ತ ಶಕ್ತಿ ಈ ವರದಾನವನ್ನು ಸಹಜವಾಗಿ ಪಡೆದಿದ್ದೇನೆ.

4. ನಾನು ಶ್ರೀಮತದ ಅನುಸಾರ ನಡೆಯುತ್ತಾ ದುರ್ಬಲತೆಗಳನ್ನು, ವಿಸ್ಮೃತಿಯನ್ನು ಸಮಾಪ್ತಿ ಮಾಡಿದ್ದೇನೆ.

5. ನಾನು ಶ್ರೇಷ್ಠ ಕರ್ಮದಿಂದ ಸ್ವತಃವಾಗಿ ಶ್ರೇಷ್ಠ ಜೀವನವನ್ನು ತಯಾರು ಮಾಡಿಕೊಂಡಿದ್ದೇನೆ. (ಶ್ರೇಷ್ಠಕರ್ಮ; ಕರ್ಮ ಮಾಡುವ ಮೊದಲು ಶ್ರೀಮತದ ಸ್ಮೃತಿ ಇರುವುದು.)

6. ನಾನು ಒಂದು ಕ್ಷಣದಲ್ಲಿ ಎಲ್ಲರಿಗೂ ತಂದೆಯ ಪರಿಚಯವನ್ನು ಕೊಟ್ಟು ನನ್ನ ಭವಿಷ್ಯ ಪ್ರಾಪ್ತಿಯನ್ನು ತಯಾರು ಮಾಡಿಕೊಂಡಿದ್ದೇನೆ.

7. ನಾನು ಜಗನ್ಮಾತೆ ಮತ್ತು ಶಿವಶಕ್ತಿ ಸ್ವರೂಪ.

(ಜಗನ್ಮಾತೆ: ಜಗತ್ತಿಗೆ ಕಲ್ಯಾಣ ಮಾಡುವವರು,

ಶಕ್ತಿ; ಯಾವುದೇ ದುರ್ಬಲತೆ ಇಲ್ಲದವರು.)

8. ನನ್ನನ್ನು ನಾನು ಸಮರ್ಪಣೆ ಮಾಡಿ ಎಲ್ಲಾ ವಿಷಯಗಳೊಂದಿಗೆ ನಷ್ಟೋಮೋಹಿಯಾದ ಸಹಜ ಸ್ಮೃತಿ ಸ್ವರೂಪ.

9. ಮಾಡಿ ಮಾಡಿಸುವವರು ತಂದೆ ನಾನು ನಿಮಿತ್ತ ಭಾವನೆಯಿಂದ ಮಾಡುತ್ತಿದ್ದೇನೆ.

10. ನಾನು ಸಮರ್ಪಣೆಯಾಗಿ ಇತರರನ್ನು ಕೂಡ ಸಮರ್ಪಣೆ ಮಾಡಿಸುತ್ತಿದ್ದೇನೆ (ಇದೇ ಬ್ರಾಹ್ಮಣರ ವ್ಯಾಪಾರ).

11. ನಾನು ಎಲ್ಲರನ್ನೂ ರಾಜ್ಯ ಪದವಿ ಹೊಂದುವವರನ್ನಾಗಿ ತಯಾರಿಸಿ, ವಿಶ್ವ ಮಹಾರಾಜ ವಿಶ್ವ ಮಹಾರಾಣಿಯಾಗುವ ಗುರಿಯನ್ನು ಇಟ್ಟುಕೊಂಡಿದ್ದೇನೆ.

12. ನಾನು ಸರ್ವ ವಿಘ್ನಗಳನ್ನು ಇದು ಪರೀಕ್ಷೆ ಎಂದು ಭಾವಿಸಿ ಸಮಾಪ್ತಿ ಮಾಡಿಕೊಂಡಿರುವ ನಿಶ್ಚಯ ಬುದ್ಧಿ ಸ್ವರೂಪ.

13. ನಾನು ಹಿಂದಿನ ಕಲ್ಪದಲ್ಲಿ ವಾರಸತ್ವವನ್ನು ತೆಗೆದುಕೊಂಡಿದ್ದೇನೆ ಈಗಲೂ ಪಡೆಯುತ್ತೇನೆ.

14. 'ನಾನು ಸರ್ವಶಕ್ತಿವಂತನಾದ ತಂದೆಗೆ ಮಗು' ಎಂಬ ಧೈರ್ಯದಿಂದ ಸ್ಮೃತಿಯನ್ನು ಸಹಜವಾಗಿ ಮಾಡಿಕೊಂಡಿದ್ದೇನೆ .

15. ನಾನು ಮನಸ್ಸಿನಲ್ಲಿರುವ ಬಲಹೀನ ಸಂಕಲ್ಪಗಳನ್ನು ಸಮಾಪ್ತಿ ಮಾಡಿ ಶಕ್ತಿಶಾಲಿಯಾದ ಸಂಕಲ್ಪ, ವಾಣಿ, ಎಲ್ಲದರಲ್ಲಿ ನಿಶ್ಚಯದಿಂದ ಇರುತ್ತಾ, ಅವ್ಯಕ್ತ ಆಕರ್ಷಣೆಯ ಅನುಭವ ಮಾಡಿಕೊಂಡು ಇತರರಿಗೆ ಕೂಡ ಮಾಡಿಸಿದ್ದೇನೆ.

16. ನನ್ನ ಸಂಕಲ್ಪ, ಮಾತು, ಕರ್ಮ ಮೂರೂ ಸಮಾನವಾಗಿರುವ ತೀವ್ರಪುರುಷಾರ್ಥಿ.

17. 'ನಾನು ಪರಂಧಾಮ ನಿವಾಸಿ, ಈಶ್ವರೀಯ ಕರ್ತವ್ಯಕ್ಕಾಗಿ ಬಂದಿದ್ದೇನೆ ಹಿಂತಿರುಗಿ ಹೋಗಬೇಕು' ಎಂಬ ಸ್ಮೃತಿಯನ್ನು ಬುದ್ಧಿಯಲ್ಲಿ ತುಂಬಿಕೊಂಡಿದ್ದೇನೆ.

18. ನಾನು ಸಮಯಕ್ಕಿಂತಲೂ ಮೊದಲೇ ಅವ್ಯಕ್ತ ಸ್ಥಿತಿಯನ್ನು ಅನುಭವ ಮಾಡಿಕೊಂಡಿರುವ ಯೋಗಯುಕ್ತ ಅವ್ಯಕ್ತ ಸ್ವರೂಪ.

19. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಗುರಿಯನ್ನು ಉನ್ನತವಾಗಿಟ್ಟುಕೊಂಡು, ಎಲ್ಲಾ ವಿಷಯಗಳಲ್ಲಿ ಸ್ವಯಂ ಅನ್ನು ಸಂಪನ್ನವಾಗಿ ಮಾಡಿಕೊಂಡಿರುವ ಸಂಪೂರ್ಣ ಪುರುಷಾರ್ಥಿ.

20. ನಾನು ಕರ್ಮೇಂದ್ರಿಯಗಳನ್ನು ಬುದ್ಧಿಯಿಂದ ನಡೆಸುವ ಧಾರಣಾ ಸ್ವರೂಪ.

21. ಜ್ಞಾನ ಸಾಗರನ ಮಗುವಾದ ನಾನು ಈಶ್ವರೀಯ ಜ್ಞಾನದ ಲೈಟ್( ಪ್ರಕಾಶ) ಮತ್ತು ಮೈಟ್ ಅನ್ನು( ಶಕ್ತಿ) ನನ್ನೊಳಗೆ ಅಳವಡಿಸಿಕೊಂಡಿದ್ದೇನೆ.

22. ಬ್ರಹ್ಮಾ ತಂದೆ ಹೇಗೆ ಉದಾಹರಣೆಯಾಗಿದ್ದರೋ ನಾನು ಹಾಗೆಯೇ ಉದಾಹರಣೆಯಾಗಿ ಕರ್ಮವನ್ನು ಮಾಡಿ ತೋರಿಸುತ್ತೇನೆ, ಎಂಬ ಗುರಿಯನ್ನು ಇಟ್ಟುಕೊಂಡಿದ್ದೇನೆ

23. ನಾನು ಶಕ್ತಿಶಾಲಿಯಾಗಿ ಇರುವ ಕಾರಣ ನನ್ನ ಮೇಲೆ ವಾತಾವರಣದ ಪ್ರಭಾವ ಬೀಳದು. ಆದರೆ ನನ್ನ ಪ್ರಭಾವ ವಾತಾವರಣದ ಮೇಲೆ ಬೀಳುತ್ತದೆ.

24. ನಾನು ಸರ್ವ ಸಂಬಂಧಗಳನ್ನು ಒಬ್ಬ ತಂದೆಯೊಂದಿಗೆ ಜೋಡಿಸಿರುವ ಮಾಯಾಜೀತ್, ಜಗಜ್ಜೀತ್ ಸ್ವರೂಪ.

25. ನಾನು ಸೇವೆ ಎಂಬ ಬಂಧನದಲ್ಲಿ ಬಂಧಿಸಿಕೊಂಡು ಸಂಪೂರ್ಣವಾಗಿ ಸರ್ವ ಸಂಬಂಧಗಳಿಂದ ಮುಕ್ತಿಯನ್ನು ಪಡೆದಿದ್ದೇನೆ.

26. ನಾನು ಶ್ರೇಷ್ಠ ಕರ್ಮದಿಂದ ವರ್ತಮಾನ ಮತ್ತು ಭವಿಷ್ಯವನ್ನು ತಯಾರು ಮಾಡಿಕೊಂಡಿದ್ದೇನೆ.

27. ಉನ್ನತೋನ್ನತವಾದ ತಂದೆಗೆ ನಾನು ಹಕ್ಕುದಾರನು. ಈ ಸ್ಮೃತಿಯ ಏಕರಸ ಸ್ಥಿತಿ ಸ್ವರೂಪ.

28. ನಾನು ಸ್ನೇಹದಲ್ಲಿ ಬಾಪ್ ದಾದಾರನ್ನು ಸದಾ ಜೊತೆಗಿಟ್ಟುಕೊಂಡಿದ್ದೇನೆ.

29. ನಾನು ಕರ್ಮಗಳ ಖಾತೆಯಲ್ಲಿ ಹಗುರವಾಗಿ ಹಾರುವ ಪಕ್ಷಿಯಾಗಿ ಇತರರನ್ನು ಕೂಡ ಹಾರಿಸಿದ್ದೇನೆ.

30. ನಾನು ಸೂಕ್ಷ್ಮವತನವಾಸಿ.

31. ನಾನು ಬಾಪ್ ದಾದಾರವರ ಸಮಾನ ಅವ್ಯಕ್ತದಲ್ಲಿ ಇರುತ್ತಾ ಅವ್ಯಕ್ತ ರೂಪ, ಅವ್ಯಕ್ತ ದೇಶ, ಅವ್ಯಕ್ತ ಪ್ರವಾಹದಲ್ಲಿ ಇದ್ದೇನೆ.

32. ನನ್ನ ಅವ್ಯಕ್ತ ಸಂಪೂರ್ಣ ಸ್ಥಿತಿ ಮತ್ತು ರಾಜ್ಯ ಪದವಿ ಸ್ಪಷ್ಟವಾಗಿ ಕಾಣಿಸುತ್ತಿದೆ.